# ನೆನಪೆನ್ನುವುದು ಬರಿ ನೆನಪಲ್ಲ...

**ತ**ಮಿಳು, ತೆಲುಗು ಅಥವಾ ಮಲಯಾಳಂ ಚಿತ್ರರಂಗದಲ್ಲಿ ಜನಪ್ರಿಯ ನಾಯಕ ನಟರ ವೃತ್ತಿ ಬದುಕಿನ ಬೆಳ್ಳಿಹಬ್ಬ, ಚಿನ್ನದ ಹಬ್ಬದಂಥ ಸಂಭ್ರಮಗಳು ಹಬ್ಬದಂತೆ ಪರಿಣಮಿಸುತ್ತವೆ. ಅಭಿಮಾನಿಗಳ ಜೊತೆಗೆ, ಇಡೀ ಚಿತ್ರೋದ್ಯಮ ಆ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತದೆ. ಆದರೆ, ಇಂಥ ಸಂಭ್ರಮಗಳನ್ನು ಕನ್ನಡ ಚಿತ್ರೋದ್ಯಮದಲ್ಲಿ ನಿರೀಕ್ಷಿಸುವಂತಿಲ್ಲ. ಭಾವನೆಗಳಿಂದ ದೂರವೇ ಉಳಿದು ಪಕ್ಕಾ ವ್ಯಾಪಾರೀ ಸಂಸ್ಥೆಯಾಗಿರುವ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಇಂಥ ಆಚರಣೆಗಳಿಗೆ ವೇದಿಕೆಯಾಗಲು ಮನಸ್ಸಿಲ್ಲ, ಪುರುಸೊತ್ತೂ ಇಲ್ಲ. ಆ ಕಾರಣದಿಂದಲೇ ಇರಬೇಕು– ನಟ ಶಿವರಾಜ್‌ಕುಮಾರ್ ತಮ್ಮ ವೃತ್ತಿ ಜೀವನದ ಬೆಳ್ಳಿಹಬ್ಬವನ್ನು ಕಂತುಕಂತಾಗಿ ಸ್ವತಃ ತಾವೇ ಆಯೋಜಿಸಿಕೊಂಡರು. ಅಭಿನಂದನೆ ಸ್ವೀಕರಿಸಬೇಕಾದವರು ಅಭಿನಂದನೆ ಸಲ್ಲಿಸಿದರು! ಇಷ್ಟಪಾತ್ರರಿಗೆ, ತಮ್ಮನ್ನು ಬೆಂಬಲಿಸಿದವರಿಗೆ ಕೃತಜ್ಞತೆ ಸಲ್ಲಿಸಿದರು! ಈ ಸಂಭ್ರಮದ ಭಾಗವಾಗಿ ಅಭಿಮಾನಿಗಳ ಸಂಘ ಇತ್ತೀಚೆಗೆ ತಮ್ಮ ನೆಚ್ಚಿನ ನಟನನ್ನು ದೊಡ್ಡ ಪ್ರಮಾಣದಲ್ಲಿ ಅಭಿನಂದಿಸಿ ಬೀಗಿತು.

ಅಭಿನಂದನಾ ಸಮಾರಂಭದ ಪ್ರಮುಖ ಆಕರ್ಷಣೆಗಳಲ್ಲಿ ಒಂದು– ಶಿವರಾಜ್ ವೃತ್ತಿಬದುಕಿನ ಪ್ರಮುಖ ಚಿತ್ರಗಳ ನಿರ್ದೇಶಕರು ಹಾಗೂ ನಿರ್ಮಾಪಕರನ್ನು ಗೌರವಿಸುವುದು. ಇದರ ಭಾಗವಾಗಿ ಸಿಂಗೀತಂ ಶ್ರೀನಿವಾಸರಾವ್, ಎಂ.ಎಸ್.ರಾಜಶೇಖರ್, ಉಪೇಂದ್ರ, ಎಂ.ಎಸ್.ರಮೇಶ್ ಮುಂತಾದವರನ್ನು ಗೌರವಿಸಲಾಯಿತು. ಇದೆಲ್ಲ ಒಳ್ಳೆಯದೇ. ಆದರೆ, ಶಿವರಾಜ್‌ರ ಪ್ರಮುಖ ಚಿತ್ರಗಳ ಪಟ್ಟಿಯಲ್ಲಿ ‘ಜನುಮದ ಜೋಡಿ’ಯೇ ನಾಪತ್ತೆ!

ಶಿವರಾಜ್‌ರ ಬಣ್ಣದ ಬದುಕಿನಲ್ಲಿ ‘ಜನುಮದ ಜೋಡಿ’ ವಿಶಿಷ್ಟ ವಿಭಿನ್ನ ಚಿತ್ರ. ಜ್ಞಾನಪೀಠ ಪ್ರಶಸ್ತಿ ವಿಜೇತ ಗುಜರಾತಿ ಲೇಖಕ ಪನ್ನಾಲಾಲ್ ಪಟೇಲ್ ಅವರ ಕಾದಂಬರಿ ಆಧರಿಸಿದ ಚಿತ್ರವಿದು. ಗಲ್ಲಾಪೆಟ್ಟಿಗೆಯಲ್ಲಿ ಬಹುದೊಡ್ಡ ಯಶಸ್ಸು ಕಂಡ ಸಿನಿಮಾ. ನಟನೊಬ್ಬನ ಹೆಜ್ಜೆಗುರುತುಗಳನ್ನು ದಾಖಲಿಸುವಾಗ ಇಂಥ ಚಿತ್ರವನ್ನು ಮರೆಯುವುದಾದರೂ ಹೇಗೆ?

‘ಜನುಮದ ಜೋಡಿ’ಯ ನಾಪತ್ತೆ ಉದ್ದೇಶಪೂರ್ವಕವಾಗಿಯೇನೂ ಇರಲಾರದು. ಆದರೆ, ಇಂಥ ಮರೆವುಗಳು ನಮ್ಮ ಸಿನಿಮಾ ಮಂದಿಯ ಅಭಿರುಚಿಯನ್ನು ಬಯಲು ಮಾಡುವಂತಿರುತ್ತವೆ. ‘ಓಂ’, ‘ಜೋಗಿ’ಯಂಥ ಚಿತ್ರಗಳ ಮೂಲಕ ಶಿವರಾಜ್‌ರನ್ನು ಗುರ್ತಿಸಲಾಗುತ್ತದೆ. ಸಿಂಹಗರ್ಜನೆ ಹಾಗೂ ಹುಲ್ಲಿನ ಸಿವುಡಿನಂಥ ಮೀಸೆಯ ಪಾತ್ರಗಳ ಮೂಲಕ ವಿಷ್ಣುವರ್ಧನ್ ಅವರನ್ನು ನೆನಪಿಸಿಕೊಳ್ಳಲಾಗುತ್ತದೆ. ಆದರೆ, ಸದಭಿರುಚಿಯ ಚಿತ್ರಗಳು ನಮ್ಮ ನಟರಿಗೆ ಮುಖ್ಯವೇ ಅನ್ನಿಸುವುದಿಲ್ಲ. ಶಿವರಾಜ್ ಅವರ ಸಂದರ್ಶನಗಳನ್ನೇ ಗಮನಿಸಿ– ‘ಚಿಗುರಿದ ಕನಸು’ ಸೋತ ಬಗ್ಗೆ ಅವರು ಹನಿಗಣ್ಣಾಗುತ್ತಾರೆ. ‘ನನ್ನ ಪ್ರೀತಿಯ ರಾಮು’ ಚಿತ್ರ ಗೆಲ್ಲದ ಬಗ್ಗೆ ದರ್ಶನ್ ಅಲವತ್ತುಕೊಳ್ಳುತ್ತಾರೆ. ಆದರೆ, ತಮ್ಮದೇ ಹೊಡಿ ಬಡಿ ಮಾದರಿಯ ಹತ್ತಾರು ಚಿತ್ರಗಳು ಒಂದರ ಹಿಂದೊಂದು ಹುಡಿಯಾದ ಬಗ್ಗೆ ಅವರು ಚಕಾರ ಎತ್ತುವುದಿಲ್ಲ. ಅದೇನು ಜಾಣಮರೆವೋ? ಅಜ್ಞಾನವೋ? ಕನ್ನಡ ಚಿತ್ರೋದ್ಯಮದ ಇವತ್ತಿನ ಬಣ್ಣಗೇಡಿತನಕ್ಕೆ ಇಂಥ ಅಜ್ಞಾನ – ಅವಜ್ಞೆಗಳ ಕೊಡುಗೆಯೂ ಇದೆಯಲ್ಲವೇ?

**–ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68